


# ಡಯಾಬಿಟಿಕ್ ನ್ಯೂರೊಪತಿ



ಡಾ. ಗಣಪತಿ ಬಂಟ್ವಾಳ್

**ಮಧುಮೇಹ ದೀರ್ಘಕಾಲ ನಿಯಂತ್ರಣದಲ್ಲಿರದೇ ಇದ್ದರೆ ಪಾದವೂ ಸೇರಿದಂತೆ ಕಾಲುಗಳಲ್ಲಿ ವಿಪರೀತ ಉರಿ, ಬೆಂಕಿ ಬಂದಂತಹ ಅನುಭವ, ಜೋಮು ಹಿಡಿದಂತಾಗುವಂತಹ ಲಕ್ಷಣಗಳುಳ್ಳ ಸಮಸ್ಯೆ ಎದುರಾಗುತ್ತದೆ. ಇದೇ ಡಯಾಬಿಟಿಕ್ ನ್ಯೂರೊಪತಿ.**

■ ಉಮಾ ಅನಂತ್

ಮಧುಗಿರಿಯ ಮಾಲತಿಗೆ ವಯಸ್ಸು ಇಪ್ಪತ್ತೈದು. ಕಳೆದ ನಾಲ್ಕು ವರ್ಷಗಳಿಂದ ಮಧುಮೇಹದಿಂದ ಬಳಲುತ್ತಿರುವ ಮಾಲತಿಗೆ ಎಷ್ಟೇ ಔಷಧಿ ಸೇವಿಸಿದರೂ ಪ್ರಯೋಜನವಾಗಲಿಲ್ಲ. ಮಧುಮೇಹ ತಜ್ಞರು ಇನ್ಸುಲಿನ್ ಇಂಜೆಕ್ಷನ್‌ಗೆ ಸಲಹೆ ನೀಡಿ ಅದನ್ನು ತೆಗೆದುಕೊಂಡರೂ ಸಕ್ಕರೆ ಕಾಯಿಲೆ ಯಾಕೋ ನಿಯಂತ್ರಣಕ್ಕೇ ಬರುತ್ತಿಲ್ಲ. ಇದರ ಪರಿಣಾಮ ಕಾಲುಗಳಲ್ಲಿ ವಿಪರೀತ ಉರಿ, ಬಿಸಿಬಿಸಿಯಾದ ಅನುಭವ, ಕೈಗಳಿಗೂ ವ್ಯಾಪಿಸಿದ ಬೆಂಕಿಭೂತ! ಜೊತೆಗೆ ಅತಿಯಾದ ಮೂತ್ರಸ್ರಾವ ಹಾಗೂ ನಿದ್ರಾಹೀನತೆ. ಈಕೆಯನ್ನು ತಪಾಸಣೆ ಮಾಡಿದಾಗ ಆಕೆಗೆ ನ್ಯೂರೊಪತಿ ಸಮಸ್ಯೆ ಬಂದಿರುವುದು ಪತ್ತೆಯಾಯಿತು.

ಮಧುಮೇಹ ಜೀವನಶೈಲಿ ಕಾಯಿಲೆ. ಇದು ಬಹಳಷ್ಟು ಜನರನ್ನು ಕಾಡುತ್ತಿದೆ. ಇನ್ಸುಲಿನ್ ಕೊರತೆಯಿಂದ ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗುವುದರಿಂದ ಕಾಡುವ ಡಯಾಬಿಟಿಸ್, ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರನ್ನೂ ಬಿಡದೇ ಬಾಧಿಸುವಂಥದ್ದು. ಇದು ಹತೋಟಿಯಲ್ಲಿ ಇರದೇ ಇದ್ದರೆ ಹಲವಾರು ಆರೋಗ್ಯ ಸಮಸ್ಯೆ ಎದುರಿಸಬೇಕಾಗುತ್ತದೆ. ಇದರಿಂದ ಹೃದಯ ತೊಂದರೆ, ಕಣ್ಣು, ಕಿಡ್ನಿಗಳನ್ನು ಹಾನಿ ಮಾಡುವುದಷ್ಟೇ ಅಲ್ಲದೆ ಕಾಲು ಉರಿಯಂತಹ ಸಮಸ್ಯೆಯೂ ಉಂಟಾಗುತ್ತದೆ. ಆದರೆ ಜೀವನಶೈಲಿ ಬದಲಾವಣೆ, ಉತ್ತಮ ಆಹಾರಕ್ರಮ, ಕಟ್ಟುನಿಟ್ಟಿನ ವ್ಯಾಯಾಮಗಳಿಂದಲೇ ಈ ಮಧುಮೇಹವನ್ನು ನಿಯಂತ್ರಣಕ್ಕೆ ತರಬಹುದು.

ಮಧುಮೇಹ ನಿಯಂತ್ರಣದಲ್ಲಿರದೇ ಇದ್ದರೆ ಇತರ ಸಮಸ್ಯೆಗಳನ್ನೂ ಎದುರಿಸಬೇಕಾಗುತ್ತದೆ. ಅನಿಯಂತ್ರಿತ ಸಕ್ಕರೆ ಕಾಯಿಲೆ ಇದ್ದಾಗ ಕಾಲು,